# ಕಂದನ ಬೆಳಗು



■ ಚಂದ್ರಿಕಾ ಹೆಗಡೆ ಮತ್ತಿಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

ಸೂರ್ಯ ಮಾಮ ಬಂದಾಯ್ತು
ಬಾನ ತುಂಬಾ ಬೆಳಕಾಯ್ತು
ಎದ್ದು ಬಾರೋ ನನ ಕಂದ
ಹಕ್ಕಿಗಳೆಲ್ಲಾ ಎದ್ದಾಯ್ತು

ಚುಮು ಚುಮು ಸುರಿಯುವ ಇಬ್ಬನಿ ಹನಿಯಲಿ
ಹೂವು ಮುಖವನು ತೊಳೆದಾಯ್ತು
ಜೇನನು ಹುಡುಕಿ ದುಂಬಿಯ ಹಿಂಡು
ಝುಂಯ್ ಝುಂಯ್ ಎಂದು ಬಂದಾಯ್ತು

ಅಂಬಾ ಎನ್ನುತ ಕುಣಿಯುತ ಕರುವು
ಅಮ್ಮನ ಹಾಲನು ಕುಡಿದಾಯ್ತು
ಗಿಣಿಮರಿಯೊಂದು ತಿಂಡಿ ತಿಂದು
ಕೊಕ್ಕನು ತಿಕ್ಕಿ ತೊಳೆದಾಯ್ತು

ಮ್ಯಾಂವ್ ಮ್ಯಾಂವ್ ಎನ್ನುವ ಮುದ್ದಿನ ಬೆಕ್ಕು
ಆಗಲೆ ತನ್ನ ಹಲ್ಲುಜ್ಜಾಯ್ತು
ಬೌವ್ ಬೌವ್ ಕೂಗುತ ಪಪ್ಪಿ ನಾಯಿ
ಕಾವಲು ಕಾಯಲು ಕುಳಿತಾಯ್ತು

ಬಣ್ಣದ ಚೀಲವ ಹೆಗಲಿಗೆ ಹಾಕಿ
ಚಿಟ್ಟೆಯು ಶಾಲೆಗೆ ಹೊರಟಾಯ್ತು

ಸಿದ್ಧವಾಗಿ ಇರುವೆಯ ಸಾಲು
ತನ್ನಯ ಕೆಲಸಕೆ ಹೋಗಾಯ್ತು

ಪುಟ್ಟ ಪುಟ್ಟ ಕಣ್ಣನು ಬಿಟ್ಟು
ಎದ್ದು ಬಾರೋ ನನ ಮುದ್ದು
ನಿನ್ನನು ಕಂಡು ಶುಭದಿನ ಹೇಳಲು
ಚಂದದ ಬೆಳಗು ಬಂದಾಯ್ತು ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: **editorsu@sudha.co.in**





ಪೂರ್ವಿಕ್ ವಿ. ಪಾಟೀಲ್
3ನೇ ತರಗತಿ, ಪೆಸಿಡೆನ್ಸಿ ಸ್ಕೂಲ್, ಬೆಂಗಳೂರು ನಾರ್ತ್





ಕೆ. ಅವನಿ ಹೆಬ್ಬಾರ್
2ನೇ ತರಗತಿ, ಹಿಲ್‌ರಾಕ್ ನ್ಯಾಷನಲ್ ಪಬ್ಲಿಕ್ ಶಾಲೆ, ಹರಪನಹಳ್ಳಿ